
## ಕಳೆದ ಸಂಚಿಕೆಯಲ್ಲಿ

ದೇವಪ್ಪನ ಚಹಾದಂಗಡಿ ದಿನೇದಿನೇ ಖ್ಯಾತಿ ಗಳಿಸುತ್ತಿತ್ತು. ಇಲ್ಲಿನ ಜನರಿಗೆ ಈ ಚಹಾದಂಗಡಿಯಲ್ಲಿ ಚಹಾ ಕುಡಿಯದಿದ್ದರೆ ರಾತ್ರಿ ಹಗಲಾಗುತ್ತಿರಲಿಲ್ಲ, ಹಗಲು ರಾತ್ರಿಯಾಗುತ್ತಿರಲಿಲ್ಲ ಎಂಬಷ್ಟರ ಮಟ್ಟಿಗೆ ಬೆಳೆಯಿತು. ಜೊತೆಗೆ ಇಲ್ಲಿನ ಸೂಸಲಾ, ಅಂಟಿನುಂಡಿ, ಖಾರ ಚುರುಮುರಿ, ಪೂರಿ ಬಾಜಿ ಎಲ್ಲವೂ ಜನರ ಬಾಯಲ್ಲಿ ನೀರೂರಿಸುತ್ತಿದ್ದವು. ಈ ಮಧ್ಯೆ ಮಾಯಕ್ಕ ಜನರ ಕಷ್ಟಸುಖಕ್ಕೆ ಒದಗುವ ಜಾಯಮಾನದವಳಾಗಿ ಎಲ್ಲರಿಗೂ ಹತ್ತಿರವಾಗತೊಡಗುತ್ತಾಳೆ. ಆಗ ಬಹುತೇಕ ಹೆಂಗಸರಿಗೆ ಅಕ್ಕ, ತಂಗಿ, ಅತ್ತಿಗೆಯಾಗಿ ಪರಿವರ್ತನೆಗೊಂಡಳು. ಬಾಲ್ಯದ ನೆನಪು ಮಾಯಕ್ಕಳನ್ನು ಕಾಡುತ್ತದೆ. ಶಾಲೆಗೆ ಹೋಗುವ ಎಳೆಯ ಬಾಲೆ ಋತುಮತಿಯಾಗುವ ಮುನ್ನವೇ ಮುತ್ತಪ್ಪ ಎಂಬಾತನೊಂದಿಗೆ ಅಪ್ಪ ಮದುವೆ ಮಾಡಿದ್ದು ನೆನಪಿಗೆ ತಂದುಕೊಳ್ಳುತ್ತಾಳೆ ಮಾಯಕ್ಕ.



ಹೋದಳು. ವೀರಭದ್ರಪ್ಪನವರ ಮಗ ಪ್ರಶಾಂತನ ಮದುವೆ ಅದ್ದೂರಿಯಾಗಿ ನಡೆದಿತ್ತು. ಅದರ ಅಡುಗೆ ಮಾಡಲು ದೇವಪ್ಪನನ್ನು ಕರೆಸಿದ್ದರು. ಬೂಂದಿ ಮಾಡುವುದರಲ್ಲಿ ಅವನದು ಎತ್ತಿದ ಕೈ ಎಂದು ಸುತ್ತಮುತ್ತಲು ಪ್ರಸಿದ್ಧನಾಗಿದ್ದ. ಬೈಲಹೊಂಗಲದಲ್ಲಿ ಮದುವೆ ಮತ್ತು ಎಕ್ಕೇರಿಯಲ್ಲಿಯೂ ಎರಡು ದಿನ ವಿಶೇಷ ಭೋಜನದ ವ್ಯವಸ್ಥೆ ಮಾಡಿದ್ದರು. ದೇವಪ್ಪನನ್ನು ತಾನು ಅದೇ ಮೊದಲು ನೋಡಿದ್ದು. ಶೋಭಕ್ಕ ಅವರ ತಂಡದವಳಾಗಿ ಆಗಾಗ ಅಡುಗೆ ಮಾಡಲು ಹೋಗುತ್ತಿದ್ದಳಂತೆ. ಇವನನ್ನು ನೋಡಿದರೆ ಇಷ್ಟು ಸ್ವಾದದ ಅಡುಗೆ ಮಾಡುತ್ತಾನೇನು ಎನಿಸಿತ್ತು.

ಊರು ಬಾಯಿ ಚಪ್ಪರಿಸುವಂತಹ ಅಡುಗೆ ಮಾಡಿದ್ದ. ಎಲ್ಲರೂ ಅವನನ್ನು ಹೊಗಳುವವರೆ. ಅವನ ಜೊತೆಗೆ ಇನ್ನೂ ನಾಲ್ವರು ಸಹಾಯಕರಿದ್ದರು. ಮೂವರು ಹೆಂಗಸರ ಪೈಕಿ ತಾನೂ ಒಬ್ಬಳು. ಮದುವೆ, ಸೀಮಂತ, ಮಗುವಿನ ನಾಮಕರಣ ಕಾರ್ಯಕ್ರಮಗಳಲ್ಲಿ ಅವನ ಅಡುಗೆಯವರಲ್ಲಿ ತಾನೂ ಒಬ್ಬಳಾಗಿ ದುಡಿಯುತ್ತಿದ್ದೆ. ಒಳ್ಳೆಯ ಪಗಾರ ಕೊಡುತ್ತಿದ್ದ. ಎಷ್ಟೋ ಸಲ ಬೇರೆ ಊರಿಗೆಲ್ಲ ಹೋಗುತ್ತಿದ್ದೆವು. ದೇವಪ್ಪನ ಸವಿಯಾದ ಮಾತಿಗೆ, ಅನ್ನಕ್ಕೆ ಒಗ್ಗರಣೆ ಹಚ್ಚುವ ರೀತಿಗೆ, ಅಡುಗೆ ಆರುವ ಮುನ್ನ ಅದರ ಮೇಲೆ ಕೈಯಾಡಿಸುವ ಪರಿಗೆ ಆಕೆ ಮನಸೋತಳು. ಮಾಯವ್ವನ ಕೈ ಚಳಕಕ್ಕೆ ಆತನೂ ಮಾರುಹೋಗಿದ್ದ. ಆಕೆ ಚಪಾತಿಯನ್ನು ಲಟ್ಟಿಸುವ ರೀತಿ, ಒಲೆಯ ಬೆಂಕಿ ಆರದಂತೆ ನೋಡಿಕೊಳ್ಳುವ ರೀತಿ, ಕೈ ಸುಟ್ಟುಕೊಳ್ಳದಂತೆ ತವೆಯನ್ನು ಮುಟ್ಟುವ ರೀತಿ ಹೆಂಗಸಿಗೆ ಹೇಳಿ ಮಾಡಿಸಿದವುಗಳೆಂದು ಆಕೆಯನ್ನು ಹೊಗಳಿದ್ದೆ ಹೊಗಳಿದ್ದು.

ದೇವಪ್ಪನೊಂದಿಗೆ ಮಾಯಕ್ಕ ಓಡಿಹೋದಳೆಂಬ ಸುದ್ದಿ ಒಂದು ದಿನ ಇದ್ದಕ್ಕಿದ್ದಂತೆ ಹರಡಿದಾಗ ಊರು ಕಕ್ಕಾಬಿಕ್ಕಿಯಾಯಿತು. 'ಎಲಾ ಅವನ, ಅವನೇನು ಚೆಂದೊ, ಛಾಯೆಯೊ? ಅಂವನ್ನ ಹೆಂಗರ ಪ್ರೀತಿ ಮಾಡಿದ್ದಾಳು? ಎಷ್ಟೋ ಮಂದಿ ಮದುವೆಯಾಗಲಿಕ್ಕೆ ಕೇಳಿದ್ರೂ ಎಲ್ಲರನ್ನೂ ತಿರಸ್ಕಾರ ಮಾಡಿದ್ಲು. ಈಗ ದೇವಪ್ಪನನ್ನ ಒಪ್ಪಕೊಂಡಾಳ. ಖರೇ ಮಜಾ ಅನಿಸ್ತದ.' ಅವಳನ್ನು ಗುಟ್ಟಾಗಿ ಪ್ರೀತಿ ಮಾಡುತ್ತಿದ್ದ ಬಹಳ ಜನ ಮಮ್ಮಲ ಮರುಗಿದರು. ಎರಡು ದಿನ ಅವರಿಗೆ ಊಟ ಸ್ವಲ್ಪವೂ ರುಚಿಸಲಿಲ್ಲ. ತಮ್ಮ ಸುತ್ತಲೂ ಏನು ನಡೆದಿದೆಯೆಂಬುದರ ಗಮನವೆ ತಮಗಿಲ್ಲ. ಎಂತಹ ಬುದ್ಧಿಗೇಡಿತನ! ತಮ್ಮನ್ನು ತಾವೇ ಹಳಿದುಕೊಂಡರು. ತಮಗೆ ತಾವೇ ಶಪಿಸಿಕೊಂಡರು.

***

ದೇವಪ್ಪನ ಮೊದಲ ಹೆಂಡತಿ ಅನಸವ್ವ ಜಗಳಗಂಟಿಯಾಗಿದ್ದಳೆನ್ನುವ ಸುದ್ದಿಯಿತ್ತು. ಆದರೆ ದೇವಪ್ಪನ ಜೋಡಿ ಆಕೆ ಅಷ್ಟು ವರ್ಷ ಸಂಸಾರ ಮಾಡಿದ್ದೇ ದೊಡ್ಡ ಮಾತು ಎನ್ನುವವರೂ ಇದ್ದರು. ಇವನನ್ನು ಮದುವೆಯಾಗಲು ಒಪ್ಪಿದ್ದಕ್ಕೆ ಆ ತಾಯಿಗೆ ದೀಡ ನಮಸ್ಕಾರ ಹಾಕಬೇಕು. ಇವನ ಕಡೆ ಏನಿತ್ತು? ಆಕೆ ಬಂದ ಮೇಲೆ ಆಸ್ತಿ ಪಾಸ್ತಿ ಮಾಡಿಕೊಂಡ. ತುಂಡು ಭೂಮಿಯಲ್ಲಿ ಚಪ್ಪರ ಹಾಕಿಕೊಂಡು ಹೊಟೇಲ ನಡೆಸುತ್ತಿರುವ ದೇವಪ್ಪನಿಗೆ ಮೊದಮೊದಲು ಕನ್ಯೆ ತೋರಿಸಲು ಎಷ್ಟೊಂದು ಮಂದಿ ಹಿಂಜರಿದಿದ್ದರು. ಆತ ಏನಿಲ್ಲವೆಂದರೂ ಮುನ್ನೂರು ಕನ್ಯೆಗಳನ್ನಾದರೂ ನೋಡಿರಬೇಕೆಂಬ ಪ್ರತೀತಿಯಿತ್ತು.

ಮುನ್ನೂರು ಹೆಣ್ಣುಮಕ್ಕಳಲ್ಲಿ ಸುಮಾರು ಎರಡು ನೂರಾ ತೊಂಬತ್ತೈದು ಮಂದಿ ಇವನನ್ನು ಸೀದಾ ಸೀದಾ ತಿರಸ್ಕಾರ ಮಾಡಿದ್ದರು. ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ಈತ ತನಗವರು ಮನಸ್ಸಿಗೆ ಬಂದಿರಲಿಲ್ಲವೆಂದು ಬಡಾಯಿ ಕೊಚ್ಚಿಕೊಳ್ಳುತ್ತಿದ್ದ. ಆ ಮಾತಿಗೆ ಮಂದಿ ಮುಸುಮುಸು ನಗುವುದಿತ್ತು ಅವನ ಮುಖದಲ್ಲಿ ಅವಲಕ್ಷಣ ಇರುವುದಷ್ಟೇ ಅಲ್ಲ, ನೋಡಿದರೆ ಕೊಳಕು ಎನಿಸುತ್ತಾನೆಂದು ಕೆಲವು ಮಹಿಳೆಯರು ತಮ್ಮ ಅವ್ವನಲ್ಲಿ ಹೇಳಿದ್ದರು. ಅವನ ಮುಖದಲ್ಲಿ ಒಂದು ರೀತಿಯ ಕರಾಳತೆ ಇದೆಯೆಂದೂ ಕೆಲವರು, ಅವನನ್ನು ನೋಡಿದರೆ ದುಷ್ಟನೂ, ದುರುಳನೂ, ವಿಕಟನೂ, ವಿಕೃತನೂ ಅನಿಸುತ್ತಾನೆಂದೂ ಕೆಲವರು ಹೇಳಿದರು. ಮೊದಲ ನೋಟ ಮತ್ತು ಮೊದಲ ಭೇಟಿಯಲ್ಲಿಯೆ ಇವನ ವಿವಾಹ ಪ್ರಸ್ತಾಪ ಬಿದ್ದುಹೋಗುತ್ತಿತ್ತು. ಎಷ್ಟೇ ಒತ್ತಾಯ ಮಾಡಿದರೂ ಕನ್ಯೆ ಇವನನ್ನಂತೂ ತಳ್ಳಿಹಾಕುತ್ತಿದ್ದಳು. ಹೀಗಾಗಿ ದೇವಪ್ಪನಿಗೆ ಕನ್ಯೆ ಹುಡುಕುವುದು ದೊಡ್ಡ ಸಾಹಸದ ಕೆಲಸವಾಗಿತ್ತು.

ದುಂಡಪ್ಪಕಾಕಾ ಆ ಜವಾಬ್ದಾರಿಯನ್ನು ಹೊತ್ತು ಕೊಂಡಿರದಿದ್ದರೆ ಈತ ಅವಿವಾಹಿತನಾಗಿಯೇ ಉಳಿಯುವ ಸಂಭವವಿತ್ತು. ಅವನ ನ್ಯೂನತೆ ಕೊರತೆಗಳು ಒಂದೇ ಎರಡೇ? 'ಅಯ್ಯ, ಅಂವನ ಹುಳುಕ ಮುಖ ಹೆಂಗ ನೋಡೋದವಾ? ಮುಖದಾಗ ಹುಳಕ ಇರೋದು ದೊಡ್ಡ ಮಾತಲ್ಲ, ಆದರ ಅದರ ಜೋಡಿ ಅಂವ ತಿನ್ನೋ ಎಲೆ ಅಡಿಕೆ ತಂಬಾಕೇನೊ? ಪಿಚಕ್ ಪಿಚಕ್ ಅಂತ ಹೊಳ್ಳೊಳ್ಳಿ ಅಂಗಳಕ್ಕ ಬಂದು ಉಗುಳುದೇನೋ? ಈಗಲೆ ಅಂವನ ಬಾಯ್ಯಾಗಿನ ಎಲ್ಲಾ ಹಲ್ಲು ಕಪ್ಪಾಗ್ಯಾವ. ಬಡತನಾನ ಹಾಸಿ ಹೊದ್ದಿರೋ ಆ ಹಳ್ಳಿಯೊಳಗ ಅವನ ಚಾದಂಗಡಿಗೆ ಯಾರು ಬಂದಾರು, ಅರ್ಧ ಕಪ್ ಚಾ ಕುಡಿದರೆ ಎಷ್ಟು ರೊಕ್ಕ ಕೂಡೀತು, ಇವನ್ಹೆಂಗ ಜೀವನ ನಡೆಸ್ತಾನು.'

ಹಲವು ಕಾರಣಗಳಿಂದ ದೇವಪ್ಪನನ್ನು ದೂರ ಸರಿಸುವವರೆ ಹೆಚ್ಚಿದ್ದರು. ಆದರೆ ದೇವಪ್ಪ ಛಲ ಬಿಡದ ತ್ರಿವಿಕ್ರಮ. ಲಗ್ನವಾಗಿಯೆ ತಾನು ಮಲ್ಲೂರಿಗೆ ಮರಳುವುದು. ಅವನ ಪ್ರತಿಜ್ಞೆ ಮುಂದೆ ಭೀಷ್ಮ ಪ್ರತಿಜ್ಞೆಯಷ್ಟೇ ಹೆಸರು ಮಾಡಿತು. ಅವನಲ್ಲಿಯ ಆತ್ಮವಿಶ್ವಾಸ ಕುಂದದಂತೆ ನೋಡಿಕೊಳ್ಳಲು ದುಂಡಪ್ಪಕಾಕಾ ಇದ್ದ.

ಅವನೇನೋ ತನಗೆ ಸುಂದರಳಾದ ವಧುವೆ ಬೇಕೆನ್ನುತ್ತಿದ್ದ. ಆದರೆ ನೋಡಿದ ಕನ್ಯೆಗಳಲ್ಲಿ ಏನಾದರೊಂದು ಕೊಂಕು ನುಡಿಯುತ್ತಿದ್ದ.

'ಅಲ್ಲೋ ದೇವ್ಯಾ, ಯಾಕೋ ಹೆಣ್ಣುಮಕ್ಕಳ ಬಗ್ಗೆ ನಿನ್ನ ಕೊಂಕು ಮತ್ತು ವ್ಯಂಗ್ಯದ ಮಾತು ಕಡಿಮೆ ಆಗ್ಯಾವಲ್ಲ? ಗೊತ್ತಾತಿಲ್ಲೋ ಈಗಲಾದರೂ ಹೆಣ್ಣುಮಕ್ಕಳ ಪವರ್? ಅದಕ್ಕೇನೆ ಯಾವುದೇ ಕಾರಣಕ್ಕೂ ಹೆಣ್ಣಿಗಾಗಲಿ ಗಂಡಿಗಾಗಲಿ ಅಸಂಯ್ಯ ಆಗುವಂಗ, ಅವರಿಗೆ ಕೀಳರಿಮೆ ಹುಟ್ಟುವಂಗ ಮಾತಾಡಬಾರದು. ತಾನು ಮದುವಿಯಾಗೋ ವ್ಯಕ್ತಿ ಹಾಂಗ ಇರಬೇಕು ಹೀಂಗ ಇರಬೇಕು ಅಂತ ಎಲ್ಲಾರೂ ಬಯಸೇ ಬಯಸ್ತಾರು. ಆದರ ಮದುವಿಯಾದ ಮ್ಯಾಲ ಹೊಂದಾಣಿಕೆ ಮಾಡಿಕೊಳ್ಳೋದು, ನಂಬಿಕೆ ಉಳಿಸಿಕೊಳ್ಳೋದು ಬಾಳ ಮುಖ್ಯ ಆಗ್ರ್ತದ." ಕಾಕಾನ ಮಾತು ಬಹಳ ಖರೆಯೆಂದು ಅನಿಸಿತು. ಈ ಮೊದಲು ತನಗೆ ಬಹಳ ಅಹಂಕಾರವಿತ್ತು. ಆದರೆ ಸಮಯವೆನ್ನುವುದು ತನ್ನ ಸೊಕ್ಕನ್ನು ಸುಟ್ಟು ಹಾಕಿತು.

ಹುಡುಗ ಸೋತ ಮುಖದೊಂದಿಗೆ ತಿರುಗಿದರೆ ಈ ಜನ್ಮದಲ್ಲಿ ಅವನ ಲಗ್ನವಾಗಲಾರದು. ಅದಕ್ಕಾಗಿ ಹೋದಲ್ಲಿ, ಬಂದಲ್ಲಿ ಕಾಕಾ ಉಪ್ಪುಖಾರ ಸವರಿ ಹೇಳುವನು. ಅವನ ಮುಖದ ಕಲೆಗಳು ಅದೃಷ್ಟದ ಸಂಕೇತಗಳು! ಕಾಲ ತನ್ನ ಅದೃಷ್ಟವನ್ನು ಒಬ್ಬೊಬ್ಬರ ಮುಖದ ಮೇಲೆ ಮರೆಮಾಚಿ ಇಟ್ಟಿರುವುದು! ಇಂತಹ ಕಲೆಗಳಿದ್ದವರು ಜೀವನದಲ್ಲಿ ತುಂಬ ಆಸ್ತಿ ಗಳಿಸಿದ್ದಾರೆಂದೂ ಅವರ ಹೃದಯ ಶ್ರೀಮಂತಿಕೆಗೆ ಎಣೆಯಿಲ್ಲವೆಂದೂ ಹೇಳುತ್ತಿದ್ದ.

ಕಾಕಾ ಹೇಳುವುದರಲ್ಲಿ ಸತ್ಯವಿದೆಯೆಂದು ಕನ್ಯಾಪಕ್ಷದವರಿಗೆ ಅನಿಸುತ್ತಿತ್ತು. (ಸಶೇಷ)